## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 663 |
| ಸದಸ್ಯರ ಹೆಸರು | : | ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | : | 17.09.2021 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ಜಲಾನಯನ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ, ಖರ್ಚು ಮಾಡಿರುವ ಹಣವೆಷ್ಟು; | ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಭೂ ಸಂಪನ್ಮೂಲ ಇಲಾಖೆಯು, ಕರ್ನಾಟಕ ರಾಜ್ಯಕ್ಕೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (Pradhana Mantri Krishi Sinchayi Yojana-Watershed Development Component) ಕಾರ್ಯಕ್ರಮದಡಿ 2009-10ನೇ ಸಾಲಿನಿಂದ ಪ್ರಾರಂಭಗೊಂಡು 2020-21ನೇ ಸಾಲಿನವರೆಗೆ ಬ್ಯಾಚ್-I ರಿಂದ VI ರವರೆಗೆ 25.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 571 ಜಲಾನಯನ ಪ್ರಾಜೆಕ್ಟ್ ಗಳಿಗೆ ಅನುಮೋದನೆ ನೀಡಿ, ರೂ 2435.46 ಕೋಟಿಗಳ ಅನುದಾನವನ್ನು (60:40 ರ ಕೇಂದ್ರ ಮತ್ತು ರಾಜ್ಯದ ಪಾಲು) ಬಿಡುಗಡೆ ಮಾಡಲಾಗಿದೆ.<br>ಈ ಕಾರ್ಯಕ್ರಮದಡಿ 2009-10ನೇ ಸಾಲಿನಿಂದ ಇಲ್ಲಿಯವರೆಗೆ ಕ್ರೋಡಿಕೃತ ಬಡ್ಡಿ ಸೇರಿದಂತೆ ರೂ.2459.30 ಕೋಟಿಗಳ ವೆಚ್ಚ ಭರಿಸಲಾಗಿದೆ. |
| ಆ) | ಈ ಪೈಕಿ ಪೂರ್ಣಗೊಂಡಿರುವ ಯೋಜನೆಗಳಾವುವು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (Pradhana Mantri Krishi Sinchayi Yojana-Watershed Development Component) ಯೋಜನೆಯಡಿ ಬ್ಯಾಚ್-I ರಿಂದ ಬ್ಯಾಚ್-IV ರಡಿ ಮಂಜೂರಾದ ಒಟ್ಟು 571 ಪ್ರಾಜೆಕ್ಟ್ ಗಳಲ್ಲಿ, 429 ಪ್ರಾಜೆಕ್ಟ್ ಗಳನ್ನು ಇದುವರೆವಿಗೂ ಅನುಷ್ಠಾನ ಮಾಡಲಾಗಿದ್ದು, ಈಗಾಗಲೇ 370 ಪ್ರಾಜೆಕ್ಟ್ ಗಳನ್ನು ಪೂರ್ಣಗೊಳಿಸಿ ಮುಕ್ತಾಯ ಮತ್ತು ಮೌಲ್ಯಮಾಪನ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಉಳಿದ 59 ಪ್ರಾಜೆಕ್ಟ್‌ಗಳು ಪ್ರಸ್ತುತ ಮುಕ್ತಾಯದ ಹಂತ ತಲುಪಿದ್ದು, ಸದರಿ 59 ಪ್ರಾಜೆಕ್ಟ್‌ಗಳ ಮುಕ್ತಾಯ ಮತ್ತು ಮೌಲ್ಯಮಾಪನ ವರದಿಗಳ ತಯಾರಿಕೆ ಕಾರ್ಯವು ಪ್ರಗತಿಯಲ್ಲಿರುತ್ತದೆ.<br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಬಾಕಿ ಇದೆ; ಹಾಗಿದ್ದಲ್ಲಿ, ಸರ್ಕಾರದ ಪ್ರಯತ್ನಗಳೇನು? | ಪ್ರಸ್ತುತ, ಸದರಿ ಕಾರ್ಯಕ್ರಮದಡಿ ಹೊಸದಾಗಿ ಯಾವ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳಲು ಬಾಕಿ ಇರುವುದಿಲ್ಲ.<br>ಆದರೆ, ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಭೂ ಸಂಪನ್ಮೂಲ ಇಲಾಖೆಯು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (Pradhana Mantri Krishi Sinchayi Yojana-Watershed Development Component) ಯೋಜನೆಯ ಬ್ಯಾಚ್-IV, V&VI ರ 142 ಪ್ರಾಜೆಕ್ಟ್‌ಗಳನ್ನು ದಿನಾಂಕ:1.8.2018 ರಿಂದ ಅನ್ವಯವಾಗುವಂತೆ ಕೇಂದ್ರ ಪಾಲಿನ ಅನುದಾನವನ್ನು ಸ್ಥಗಿತಗೊಳಿಸಿ, ರಾಜ್ಯದ ಆಯವ್ಯಯದಿಂದ ಮುಂದುವರೆಸಲು ಸೂಚಿಸಲಾದ ಹಿನ್ನಲೆಯಲ್ಲಿ, ಸದರಿ ಪ್ರಾಜೆಕ್ಟ್‌ಗಳನ್ನು ದಿನಾಂಕ:01.09.2018 ರಿಂದ ರಾಜ್ಯದಲ್ಲಿ ಸ್ಥಗಿತಗೊಳಿಸಿ, ಈ 142 ಪ್ರಾಜೆಕ್ಟ್ ಗಳಡಿ ಮಂಜೂರಾದ ಕಾಮಗಾರಿಗಳನ್ನು ನರೇಗಾ (MGNREGA), ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು (PMKSY-OI), ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಮತ್ತು ಇತರೆ ಯೋಜನೆಗಳಡಿ ಆಯಾ ಯೋಜನೆಗಳ ಮಾರ್ಗಸೂಚಿ ಅನುಸಾರ ಒಗ್ಗೂಡಿಸಿ ಅನುಷ್ಠಾನ ಮಾಡಲು ತೀರ್ಮಾನಿಸಲಾಗಿದೆ.<br>ಈ 142 ಪ್ರಾಜೆಕ್ಟ್ ಗಳಲ್ಲಿ ಈಗಾಗಲೇ 8 ಪ್ರಾಜೆಕ್ಟ್‌ಗಳನ್ನು ಸುಜಲಾ-3 ರಡಿ ಉಪಚರಿಸಿ ಮುಕ್ತಾಯಗೊಳಿಸಲಾಗಿದೆ. |

**ಸಂಖ್ಯೆ:ಕೃಇ/102/ಕೃಕೈಲು/2021**

(ಬಿ.ಸಿ.ಪಾಟೀಲ್)
ಕೃಷಿ ಸಚಿವರು